# 6ನೇ ದಿನ



| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಫಲ | ಬೋಧನೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಫಲ | ಬೋಧನೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| | 40 ನಿಮಿಷ | ದೈಹಿಕ ಶಿಕ್ಷಣ | | | | **ಸಾಮೂಹಿಕ ಕವಾಯತನಲ್ಲಿ ಭಾಗವಹಿಸುವರು.** | | | | | |
| ಒಂದನೇ ಅವಧಿ | 10 ನಿಮಿಷ<br><br>70 ನಿಮಿಷ | ಕನ್ನಡ<br>ನನ್ನ ಕನ್ನಡ ನಾಡು | * ಕವಿತೆಯನ್ನು ಕಂಠಪಾಠ ಮಾಡಿ ಒಪ್ಪಿಸುವರು. | ಜ್ಞಾನಪೀಠ ಪ್ರಶಸ್ತಿ ಪಡೆದ ಸಾಹಿತಿಗಳ ಭಾವಚಿತ್ರಗಳು, ಕತ್ತರಿ, ಸ್ಕೇಲ್, ಗೋಂದು, ಡ್ರಾಯಿಂಗ್ ಶೀಟ್ | ಶಿಕ್ಷಕರು | **ಪೂ.ಸಿ.ಚ :–**<br>ಜೋಗದಸಿರಿ ಬೆಳಕಿನಲ್ಲಿ ....................................<br>.................................... ತುಂಗೆಯ ತೆನೆ ಬಳುಕಿನಲ್ಲಿ<br>ನಾಡಗೀತೆಯನ್ನು ರಾಗಬದ್ಧವಾಗಿ ಹೇಳಿ ಕೊಡುವರು.<br><br>**ಕಲಿಕಾಂಶ ಚಟುವಟಿಕೆ :–**<br>ಕರ್ನಾಟಕದ ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಗಳ ಭಾವಚಿತ್ರವನ್ನು ಸಂಗ್ರಹಿಸಿ ಅವರ ಜೀವನ ಚರಿತ್ರೆಯೊಂದಿಗೆ ಭಾವಚಿತ್ರ ಕೋಶವನ್ನು ತಯಾರಿಸುವರು.<br>**ಸೂಚನೆ :**<br>ಮಕ್ಕಳನ್ನು ಗುಂಪಿನಲ್ಲಿ ಕೂರಿಸಿ ಅಗತ್ಯ ಮಾಹಿತಿಯನ್ನು ಮಕ್ಕಳಿಗೆ ನೀಡಿ ಒಂದೊಂದು ಗುಂಪು, ಒಂದೊಂದು ಕವಿಗಳ ಜೀವನ ಚರಿತ್ರೆಯನ್ನು ತಯಾರಿಸಲು ನೆರವಾಗುವರು. | 5ನೇ ತರಗತಿ ಮಕ್ಕಳು 3ನೇ ತರಗತಿಯಲ್ಲಿರುತ್ತಾರೆ. | | | | |

# 6ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 20 ನಿಮಿಷ | ಸಾ. ಉ. ಉ. ಕಾ. – ಬುಕ್ ಬೈಂಡಿಂಗ್ | * ಮಕ್ಕಳು ತಮ್ಮ ಪುಸ್ತಕಗಳಿಗೆ ಬುಕ್ ಬೈಂಡಿಂಗ್ ಮಾಡುವ ಕಲೆಯನ್ನು ಕಲಿಯುವರು | ರಟ್ಟು, ಗೊಂದು, ಕಲರ್ ಹಾಳೆ, ಡ್ರಾಯಿಂಗ್ ಶೀಟ್, ಕ್ಯಾಲಿಕೋ, ಬಟ್ಟೆ, ಸೂಜಿ, ದಾರ | ಶಿಕ್ಷಕರು | **ಪೂ.ಸಿ.ಚ :–** “ಸಾಗರದ ನೀರು ಕಾದು ಆವಿಯಾಗಿ ಮೇಲೆ ತಂಪಾಗಿ ಚಲಿಸುವುದು ಮೊಡವಾಗಿ”. ಈ ಗೀತೆಯನ್ನು ರಾಗಬದ್ಧವಾಗಿ 5 ಮತ್ತು 4ನೇ ತರಗತಿಗೆ ಹೇಳಿ ಕೊಡುವರು. | 5ನೇ ತರಗತಿ ಮಕ್ಕಳು 4ನೇ ತರಗತಿ ಮಕ್ಕಳೊಂದಿಗೆ ಕುಳಿತು ಸಾ.ಉ.ಉ.ಕಾ. ನಿರ್ವಹಿಸುವರು. | | | | |
| | 30 ನಿಮಿಷ<br>30 ನಿಮಿಷ | | | | | **ಬುಕ್ ಬೈಂಡಿಂಗ್:** ಮಕ್ಕಳನ್ನು ಗುಂಪುಗಳನ್ನಾಗಿ ವಿಂಗಡಿಸಿ ಪುಸ್ತಕದ ಬೈಂಡಿಂಗ್ ಮಾಡುವುದನ್ನು ಹೇಳಿಕೊಡುವರು.<br>**ವಿಧಾನ :** ಪುಸ್ತಕದ ಅಳತೆಗನುಗುಣವಾಗಿ ರಟ್ಟನ್ನು ಕತ್ತರಿಸಿಕೊಂಡು, ಫೆವಿಕಲ್ ಸಹಾಯದೊಂದಿಗೆ ಬಟ್ಟೆಯನ್ನು ಅಂಟಿಸಿಕೊಳ್ಳುವುದು ಹಾಗೂ ಬಣ್ಣದ ಪೇಪರನ್ನು ರಟ್ಟಿಗೆ ಅಂಟಿಸಿಕೊಳ್ಳುವುದು. ಸೂಜಿ ದಾರದ ಸಹಾಯದೊಂದಿಗೆ ಬೈಂಡಿಂಗ್ ಮಾಡುವರು.<br>ನಂತರ ಮೇಲ್ಕಂಡ ವಿಧಾನವನ್ನು ಅನುಸರಿಸಿ ಮಕ್ಕಳು ಗುಂಪಿನೊಂದಿಗೆ ಬುಕ್ ಬೈಂಡಿಂಗ್ ಮಾಡುವ ಕೌಶಲವನ್ನು ಪಡೆಯುವರು.<br>ಶಿಕ್ಷಕರು ಮೇಲ್ವಿಚಾರಣೆ ಮಾಡಿ, ಸಲಹೆ ನೀಡುವರು. | | | | | |

# 7ನೇ ದಿನ



| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ಘಟಕ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬೋಧನಾ ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ಘಟಕ ಮತ್ತು ಪಾಠದ ಹೆಸರು | ಸಾಮರ್ಥ್ಯಗಳು | ಬೋಧನಾ ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಒಂದನೇ ಅವಧಿ | 15 ನಿಮಿಷ | ಪಕ್ಷಿ ಪ್ರೇಮಿ ಸಲೀಂ ಅಲಿ | * ಪರಿಚಿತ ಸನ್ನಿವೇಶಗಳು ಮತ್ತು ಅಪರಿಚಿತ ಸನ್ನಿವೇಶಗಳಲ್ಲಿ ಭಾಷಣ – ಸಂಭಾಷಣೆಗಳನ್ನು ಆಲಿಸುವುದರ ಜೊತೆಗೆ ಅರ್ಥ ಮಾಡಿಕೊಳ್ಳುವರು. | ಪಕ್ಷಿ ಪ್ರೇಮಿ ಸಲೀಂ ಅಲಿಯವರ ಭಾವಚಿತ್ರ<br>ವಿವಿಧ ಪಕ್ಷಿಗಳ ಭಾವಚಿತ್ರ<br>ಹೊಸ ಪದಗಳ ಪಟ್ಟಿ | ಶಿಕ್ಷಕರು | **ಪೂ.ಸಿ.ಚ :–**<br>"ಕೂಹೂ, ಕೂಹೂ ನೀ ಕೋಗಿಲೆಯೇ<br>ನಾ ಹಾಡುವೆ ಹಾಡೊಂದ ಹಾಡುವೆಯ"<br>(ಈ ಗೀತೆಯನ್ನು ಮಕ್ಕಳಿಗೆ ಹೇಳಿಕೊಟ್ಟು ತರಗತಿ ವಾತಾವರಣಕ್ಕೆ ಅಣಿಗೊಳಿಸುವರು). | | | | | 5ನೇ ತರಗತಿ ಮಕ್ಕಳು 3ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತಾರೆ. |
| | 50 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>(ಮೊದಲ ಎರಡು ಪ್ಯಾರ ಮಾತ್ರ)<br>ಮಾದರಿಯಾಗಿ ಪಾಠವನ್ನು ವಾಚಿಸುವರು.<br>ನಂತರ ಮಕ್ಕಳು ಓದುವರು.<br>ಪಕ್ಷಿ ಪ್ರೇಮಿ ಸಲೀಂ ಅಲಿಯವರ ಭಾವಚಿತ್ರ ಪ್ರದರ್ಶಿಸಿ ಪಾಠವನ್ನು ವಿವರಿಸುವರು.<br>ಹೊಸ ಪದಗಳನ್ನು ಮತ್ತು ವಿರುದ್ಧ ಪದಗಳ ಪರಿಚಯಿಸುವರು. | | | | | |
| | 10 ನಿಮಿಷ | | | | | **ಅಭ್ಯಾಸ ಚಟುವಟಿಕೆ :–**<br>ಪೂರ್ಣ ಅಚ್ಚಾದ ಪಕ್ಷಿಗಳ ಚಿತ್ರಗಳನ್ನು ಕೊಟ್ಟು ಸೂಕ್ತವಾದ ಬಣ್ಣ ಹಚ್ಚುವರು. | | | | | |
| | 05 ನಿಮಿಷ | | | | | **ಮೌಲ್ಯಮಾಪನ ಚಟುವಟಿಕೆ :–**<br>(ಕೆಳಗಿನ ಪ್ರಶ್ನೆಗಳಿಗೆ ಉತ್ತರ ಪಡೆಯುವರು)<br>1) ಸಲೀಂ ಅಲಿ ಯಾರು ?<br>2) ಬೆಳ್ಳೂರಿನ ಯುವಕ ಮಂಡಳಿಯವರು ಯಾರ ಜನ್ಮ ಶತಮಾನೋತ್ಸವ ಆಚರಿಸುವರು ? | | | | | |

# 7ನೇ ದಿನ



| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ಕಲಿಕಾ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣ / ಸಂಪನ್ಮೂಲ | ಜವಾಬ್ದಾರಿ | ಕಲಿಕಾ ಪ್ರಕ್ರಿಯೆ | ಕಲಿಕಾ ಸಾಮರ್ಥ್ಯ | ಕಲಿಕಾ ಉದ್ದೇಶ | ಕಲಿಕೋಪಕರಣ / ಸಂಪನ್ಮೂಲ | ಜವಾಬ್ದಾರಿ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 20 ನಿಮಿಷ<br>40 ನಿಮಿಷ<br>20 ನಿಮಿಷ | ಜೀವನ ಮೌಲ್ಯ<br>ತ್ಯಾಗ, ಸರಳತೆ, ಸಾಹಸ | * ಮಕ್ಕಳು ಗಾಂಧೀಜಿಯವರ ಜೀವನದಲ್ಲಿ ತ್ಯಾಗ ಸರಳತೆ, ಸಾಹಸ ಅಳವಡಿಸಿಕೊಂಡ ಬಗ್ಗೆ ತಿಳಿಯುವರು | "ಗಾಂಧೀಜಿಯವರ ಸತ್ಯಾನ್ವೇಷಣೆ ಕೃತಿ" ಕನ್ನಡ ಅನುವಾದ | ಶಿಕ್ಷಕರು | **ಪೂ.ಸಿ.ಚ :–**<br>ಬಲಗೈಯಲ್ಲಿ ಕೋಲು<br>ಎಡಗೈಯಲ್ಲಿ ರಾಟೆ<br>ಇವರು ಯಾರು ಗೊತ್ತೆ ?<br>ಅವರೇ ನಮ್ಮ ಗಾಂಧಿ<br>ಈ ಗೀತೆಯನ್ನು ಶಿಕ್ಷಕರು ಹೇಳಿಕೊಡುವರು.<br><br>ಗಾಂಧೀಜಿಯವರು ಅನುಸರಿಸಿಕೊಂಡ ಸರಳತೆ, ತ್ಯಾಗ, ಸಾಹಸದ ಬಗ್ಗೆ ಮಕ್ಕಳಿಗೆ ತಿಳಿಸುವರು.<br>ಸಾಹಸ, ಸರಳತೆ, ತ್ಯಾಗಕ್ಕೆ ಸಂಬಂಧಿಸಿದ ಚಿತ್ರಪಟಗಳ ಪ್ರದರ್ಶಿಸುವರು.<br>ಗ್ರಂಥಾಲಯದಲ್ಲಿನ ಗಾಂಧೀಜಿಯವರಿಗೆ ಸಂಬಂಧಿಸಿದ ಪುಸ್ತಕಗಳನ್ನು ತೆಗೆಸಿ ಗಾಂಧೀಜಿಯವರ ಬಗ್ಗೆ ಲಘು ಟಿಪ್ಪಣಿ ಬರೆಯುವಂತೆ ತಿಳಿಸುವರು. | 5ನೇ ತರಗತಿ ಮಕ್ಕಳು 3ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತಾರೆ. | | | | |

| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಮೂರನೇ ಅವಧಿ | 10 ನಿಮಿಷ | **ಗಣಿತ**<br>**ಸಂಖ್ಯಾಸೂಚಕಗಳು** | * ಕೊಟ್ಟಿರುವ ಅಂಕೆಗಳನ್ನು ಬಳಸಿಕೊಂಡು ಸಾಧ್ಯವಿರುವ ಎಲ್ಲ ಮೂರಂಕಿಗಳ, ನಾಲ್ಕಂಕಿಗಳ ಸಂಖ್ಯೆಗಳನ್ನು ರೂಪಿಸುತ್ತಾರೆ. | ಸಂಖ್ಯಾ ಫಲಕಗಳು | ಹಿರೇಮಣಿ | **ಪೂ.ಸಿ.ಚ :–**<br>"ನಮ್ಮದವ್ವ ಹತ್ತು ಹಕ್ಕಿ ಚಿಲಿ ಚಿಲಿ ಗುಟ್ಟುತ್ತವ ಅದರಲ್ಲಿ ಒಂದು ಹಾರಿ ಎಷ್ಟು ಉಳಿದವ" ಎಂಬ ಅಭಿನಯ ಗೀತೆಯನ್ನು ಶಿಕ್ಷಕರು ಹೇಳಿಕೊಡುವರು. | **English : We're helpful** | Pupils to enjoy reciting rhyme | Rhyme chart | Teacher | Teacher recite the rhyme Old Mac Donald and ask the children to recite it line by line. |
| | 30 ನಿಮಿಷ | | | | | ಶಿಕ್ಷಕರು ಹಿರೇಮಣಿ ನೇತೃತ್ವದಲ್ಲಿ ಅಂಕಿಗಳ ಮಿಂಚು ಪಟ್ಟಿಗಳನ್ನು ಮಕ್ಕಳ ಮಧ್ಯದಲ್ಲಿ ಹಾಕಿ, ಕೊಟ್ಟಿರುವ ಮಿಂಚುಪಟ್ಟಿಗಳಿಂದ ಸಾಧ್ಯವಾಗಬಹುದಾದ ಮೂರಂಕಿ ಸಂಖ್ಯೆಗಳನ್ನು ಹಾಗೆಯೇ ನಾಲ್ಕಂಕಿ ಸಂಖ್ಯೆಗಳನ್ನು ರಚಿಸುವರು.<br>(ಮುಂದುವರೆಯುತ್ತದೆ) | | Pupils listen and learn the names of different animals and their uses | Pictures of animals and related flash cards | Teacher | Teacher exhibit the picture of animals and ask them to name the animals. At the same time teacher to show some related picture card to elicit the uses of animals. |
| | 10 ನಿಮಿಷ | | | | ಶಿಕ್ಷಕರು | ಶಿಕ್ಷಕರು ಹಿರೇಮಣಿ ನೇತೃತ್ವದಲ್ಲಿ ರಚಿಸಿರುವ ಸಂಖ್ಯೆಗಳನ್ನು ಪರಿಶೀಲಿಸಿ ಸೂಚನೆ ನೀಡುವರು. | **ಸಮಾಜ ವಿಜ್ಞಾನ**<br>**ಭಾರತ ದೇಶ ಮತ್ತು ಜನಾಂಗ** | * ಇತಿಹಾಸದ ಅರ್ಥ ಮತ್ತು ಪ್ರಾಮುಖ್ಯತೆ ಅರಿಯುವುದು.<br>* ಭಿನ್ನತೆಯಲ್ಲಿ ಏಕತೆ ಎಂಬ ಭಾರತದ ವೈಶಿಷ್ಟ್ಯವನ್ನು ತಿಳಿಯುವುದು. | ಭಾರತದ ಭೂಪಟ | ಹಿರೇಮಣಿ | ಶಿಕ್ಷಕರು ಹಿರೇಮಣಿಯ ಸಹಾಯದಿಂದ ಭೂಮಿಯ ಮೇಲಿರುವ ಸಂಪನ್ಮೂಲಗಳನ್ನು ಪಟ್ಟಿ ಮಾಡಿಸುವಂತೆ ಸೂಚಿಸುವರು.<br>ಉದಾ :– ಕಾಡು, ಬೆಟ್ಟ, ಸಾಗರ<br>ಭೂಪಟದಲ್ಲಿ ಸಂಪನ್ಮೂಲಗಳನ್ನು ಹಾಗೂ ನಕ್ಷೆ ಬರೆದು ಭಾರತದ ಮೇರೆಗಳನ್ನು ಗುರ್ತಿಸುವರು. |
| | 30 ನಿಮಿಷ | | | | | ನಂತರ ಪಠ್ಯಪುಸ್ತಕದಲ್ಲಿನ ಪುಟಸಂಖ್ಯೆ 23, 24 ಅಭ್ಯಾಸ ಲೆಕ್ಕಗಳನ್ನು ಮಾಡಿಸುವರು. | | | | | |

# 7ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ನಾಲ್ಕನೇ ಅವಧಿ | 10 ನಿಮಿಷ | **ಪರಿಸರ ಅಧ್ಯಯನ – ಸಸ್ಯ ಪ್ರಪಂಚ** | * ಸಸ್ಯದ ಭಾಗಗಳನ್ನು ಗುರುತಿಸುವರು | ಸಸ್ಯಗಳು / ಚಿತ್ರಪಟಗಳು | ಶಿಕ್ಷಕರು | **ಪೂ.ಸಿ.ಚ. :–**<br>“ಬೇಕೆ ಬೇಕು ತರಕಾರಿ”<br>ಎಂಬ ಅಭಿನಯ ಗೀತೆಯನ್ನು ಹೇಳಿಕೊಡುವರು. | **ವಿಜ್ಞಾನ ಕೆಲಸ** | ಕೆಲಸದ ಅರ್ಥವನ್ನು ಉದಾಹರಣೆ ಮೂಲಕ ವಿವರಿಸುವರು<br>ಕೆಲಸ ನಡೆಯುವ ಸಂದರ್ಭವನ್ನು ತಿಳಿಯುವರು | ಗಾಳಿ, ಮಣೆ, ಚೆಂಡು, ಹಗ್ಗ | ಹಿರೇಮಣಿ | 4ನೇ ತರಗತಿ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಪಾಲ್ಗೊಳ್ಳುವರು. |
| | 30 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>ಚಿತ್ರಪಟಗಳನ್ನು ಬಳಸಿಕೊಂಡು ಮಕ್ಕಳಿಗೆ ಸಸ್ಯಗಳ ಭಾಗಗಳನ್ನು ಪರಿಚಯಿಸುವರು.<br>ಈ ಸಸ್ಯಗಳಿಂದ ನಮಗಾಗುವ ಪ್ರಯೋಜನಗಳನ್ನು ವಿವರಿಸಿ ಹೇಳುವರು.<br>ಸಸ್ಯದ ಎಲ್ಲ ಭಾಗಗಳನ್ನು ಮಕ್ಕಳು ಗುರುತಿಸುವರು. | | | | | ಸೂಚನೆಯಂತೆ ಮಕ್ಕಳು ಮಾಡುವ ಕೆಲಸಗಳನ್ನು ತಮ್ಮ ಬರವಣಿಗೆ ಪುಸ್ತಕದಲ್ಲಿ ಪಟ್ಟಿ ಮಾಡುವರು. |
| | 30 ನಿಮಿಷ | | | ಬಣ್ಣದ ಪೆನ್ಸಿಲ್, ಡ್ರಾಯಿಂಗ್ ಶೀಟ್ ಸ್ಕೇಲ್, ವಾಟರ್ ಬಣ್ಣ | ಹಿರೇಮಣಿ | **ಅಭ್ಯಾಸ ಚಟುವಟಿಕೆ :–**<br>ಶಿಕ್ಷಕರ ಸೂಚನೆಯಂತೆ ಸಸ್ಯದ ಚಿತ್ರವನ್ನು ಬರೆದು ಭಾಗಗಳನ್ನು ಗುರುತಿಸುವರು. | ಸಾ. ಉ. ಉ. ಕ. | ಬಣ್ಣದ ಹಾಳೆಗಳಿಂದ ವಿವಿಧ ರೀತಿಯ ಹೂ ತಯಾರಿಸುವುದು | ಬಣ್ಣದ ಪೇಪರ್, ಕತ್ತರಿ, ಅಂಟು, ದಾರ, ಬಿದಿರು | ಶಿಕ್ಷಕರು | ಎಲ್ಲಾ ಮಕ್ಕಳಿಗೂ ಸಾಮಾಗ್ರಿಗಳನ್ನು ನೀಡಿ, ಶಿಕ್ಷಕರ ಮಾರ್ಗದರ್ಶನದೊಂದಿಗೆ ಹಲವು ರೀತಿಯ ಬಣ್ಣದ ಕಾಗದದಿಂದ ಹೂ ತಯಾರಿಕೆ ಬಗ್ಗೆ ತಿಳಿಸಿ ಹೂ ತಯಾರಿಸಲು ತಿಳಿಸುವರು.<br>ಮಾದರಿಯಾಗಿ ಶಿಕ್ಷಕರು ಸಿದ್ಧಪಡಿಸುವರು. ವಿದ್ಯಾರ್ಥಿಗಳು ಗುಂಪಿನಲ್ಲಿ ತಯಾರಿಸುವರು.<br>ಶಿಕ್ಷಕರು ಪರಿಶೀಲಿಸುವರು.<br>  |
| | 10 ನಿಮಿಷ | | | | | **ಮೌಲ್ಯಮಾಪನ ಚಟುವಟಿಕೆ :–**<br>1) ಸಸ್ಯದ ಅಂದವಾದ ಭಾಗ ____________<br>2) ಸಸ್ಯದ ಆಹಾರ ತಯಾರಿಕ ಭಾಗ ____________<br>ಮೇಲಿನ ಚಟುವಟಿಕೆ ಪರಿಶೀಲಿಸುವರು. | | | | | |

# 8ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಸಾಮರ್ಥ್ಯ | ಬಳಸುವ ಕಲಿಕೋಪಕರಣಗಳು | ಮೌಲ್ಯಮಾಪನ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಕಲಿಕಾ ಸಾಮರ್ಥ್ಯ | ಬಳಸುವ ಕಲಿಕೋಪಕರಣಗಳು | ಮೌಲ್ಯಮಾಪನ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಒಂದನೇ ಅವಧಿ | 10 ನಿಮಿಷ | ಕನ್ನಡ<br>2. ಪಕ್ಷಿ ಪ್ರೇಮಿ ಸಲೀಂ ಅಲಿ (ಮು.ಭಾ) | * ಪರಿಚಿತ ಸನ್ನಿವೇಶಗಳು ಮತ್ತು ಅಪರಿಚಿತ ಸನ್ನಿವೇಶಗಳಲ್ಲಿ ಭಾಷಣ–ಸಂಭಾಷಣೆಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವರು. | ಭಾರತದ ನಕ್ಷೆ, ಕರ್ನಾಟಕ ನಕ್ಷೆ | ಪ್ರಶ್ನೋತ್ತರ | **ಕ.ಪೂ.ಚ :–**<br>ಪಕ್ಷಿ ಪ್ರೇಮಿ ಸಲೀಂ ಅಲಿ ಪಾಠದ ಹಿಂದಿನ ಅವಧಿಯ 2 ಪ್ಯಾರಾಗಳನ್ನು ಆಧರಿಸಿ ಸರಳ ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು. | 5ನೇ ತರಗತಿ ಮಕ್ಕಳು 3ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತಾರೆ. | | | | |
| | 40 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>* ಮಕ್ಕಳೆಲ್ಲ ಉತ್ಸಾಹದಿಂದ ......... ......... ......... ......................... ......................... ......................... ......................... ......................... ......................... ......................... ಸಲೀಂ ಅಲಿ ಬರೆದಿದ್ದಾರೆ. ಅರ್ಥಪೂರ್ಣವಾಗಿ ಮಾದರಿ ವಾಚನ ಮಾಡುವರು.<br>* ಮಕ್ಕಳು ಹೊಸ ಪದಗಳ ಅರ್ಥ ತಿಳಿಯುವರು.<br>1) ಚಡಪಡಿಸುವ:– ಆತಂಕ<br>2) ಕುತೂಹಲ:– ವಿಸ್ಮಯ<br>3) ತಾಣ:– ಸ್ಥಾನ, ಸ್ಥಳ<br>* ಮಕ್ಕಳು ಮೌನವಾಚನ ಮಾಡುವರು.<br>* ಸರಳ ಪ್ರಶ್ನೆಗಳಿಗೆ ಉತ್ತರಿಸುವರು.<br>ಉದಾ:–<br>1) ಸಲೀಂ ಅಲಿರವರ ಚಿಕ್ಕಪ್ಪ ಯಾರು ?<br>2) ಹಕ್ಕಿಯ ಬಣ್ಣ ತಿಳಿಯಲು ಸಲೀಂನನ್ನು ಚಿಕ್ಕಪ್ಪ ಎಲ್ಲಿಗೆ ಕರೆದೊಯ್ದರು ? | | | | | |
| | 30 ನಿಮಿಷ | | | | | **ಅಭ್ಯಾಸ ಮತ್ತು ಬಳಕೆ ಚಟುವಟಿಕೆ :–**<br>* ಮಕ್ಕಳಿಂದ ಪಾಠ. ವೈಯಕ್ತಿಕವಾಗಿ ಓದಿಸುವರು.<br>* ಪ್ರಶ್ನೆಗಳಿಗೆ ಉತ್ತರ ಬರೆಯುವರು.<br>ಉದಾ:–<br>1) ಶತಮಾನೋತ್ಸವ ಕಾರ್ಯಕ್ರಮದಲ್ಲಿ ಯಾರು ಭಾಷಣ ಮಾಡಿದರು ?<br>2) ಬೆಳ್ಳೂರು ಯಾರ ತಾಣವಾಗಿತ್ತು ?<br>* ನಕ್ಷೆಯಲ್ಲಿ ಮುಂಬೈ, ಬರ್ಮ ಸ್ಥಳಗಳನ್ನು ಗುರುತಿಸುವರು. | | | | | |

# 8ನೇ ದಿನ

| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 10 ನಿಮಿಷ | ಜೀವನ ವಿಜ್ಞಾನ<br>ಭಕ್ತಿ ಕಥೆ | * ಶ್ರದ್ಧೆ, ಭಕ್ತಿಯಿಂದ ಮಾಡಿದ ಯಾವುದೇ ಕಾರ್ಯ ಯಶಸ್ವಿ ಯಾಗುವುದೆಂದ ತಿಳಿಯುವರು. ಆಲಿಸುವ ಸಾಮರ್ಥ್ಯ ಬೆಳೆಸುವುದು | ಕಥೆಗೆ ಸಂಬಂಧಿಸಿದ ಚಾರ್ಟ್, ಮಿಂಚು ಪಟ್ಟಿಗಳು | ಶಿಕ್ಷಕರು | **ಪೂ.ಸಿ.ಚ. :–**<br>* ಬಸವಣ್ಣನವರ ಎರಡು ವಚನಗಳನ್ನು ರಾಗವಾಗಿ ಹಾಡಿಸುವರು.<br>"ಕಳಬೇಡ ಕೊಲಬೇಡ ..................................<br>.............................................. ಕೂಡಲಸಂಗಮ ದೇವನೊಲಿಸುವ ಪರಿ" | 5ನೇ ತರಗತಿ ಮಕ್ಕಳು 3ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತಾರೆ. | | | | |
| | 30 ನಿಮಿಷ | | | | | * 'ಭಕ್ತ ಕುಂಬಾರ'ನ ಕಥೆಯನ್ನು ಶಿಕ್ಷಕರು ಚಿತ್ರಪಟದೊಂದಿಗೆ ವಿವರಿಸುವರು.<br>* ಚಿತ್ರಪಟವನ್ನು ವೀಕ್ಷಿಸುತ್ತಾ ಕಥೆಯನ್ನು ಆಲಿಸುವರು.<br>* ಕಥೆಗೆ ಸಂಬಂಧಿಸಿದ ಸರಳ ಪ್ರಶ್ನೆಗಳಿಗೆ ಉತ್ತರಿಸುವರು.<br>ಉದಾ :–<br>1) ನಿಮ್ಮ ಊರಿನಲ್ಲಿ ಯಾವ ಯಾವ ಉದ್ಯೋಗ ಮಾಡುತ್ತಾರೆ ?<br>2) ಮಡಿಕೆ ಮಾಡಲು ಯಾವ ಯಾವ ಸಾಮಗ್ರಿಗಳು ಬೇಕು ? | | | | | |
| | 40 ನಿಮಿಷ | | | | | * ಮಕ್ಕಳು ತಾವು ತಿಳಿದಿರುವ ಕಥೆಗಳನ್ನು ಹೇಳುವರು.<br>* ಭಕ್ತ ಕುಂಬಾರನ ಕಥೆಯನ್ನು ಹೇಳುವರು. | | | | | |

| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕೋಪಕರಣಗಳು | ನಾಯಕರು | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯಗಳು | ಬಳಸಬೇಕಾದ ಕಲಿಕೋಪಕರಣಗಳು | ನಾಯಕರು | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಮೂರನೇ ಅವಧಿ | 10 ನಿಮಿಷ<br>30 ನಿಮಿಷ | **ಪರಿಸರ ಅಧ್ಯಯನ**<br>**ಸಸ್ಯ ಪ್ರಪಂಚ (ಮು.ಭಾ)** | * ಸಸ್ಯದ ಭಾಗಗಳು ಕಾರ್ಯಗಳನ್ನು ತಿಳಿಯುವರು | ಎಲೆ, ಕಾಂಡ, ಬೇರು (ಸಸ್ಯ)<br>ಸಸ್ಯದ ಚಿತ್ರಪಟ, ಮಿಂಚುಪಟ್ಟಿ | ಶಿಕ್ಷಕರು | **ಪೂ.ಸಿ.ಚ :–**<br>ವೃತ್ತದಲ್ಲಿ ವಿದ್ಯಾರ್ಥಿಗಳನ್ನು ನಿಲ್ಲಿಸಿ “ಬಂತಪ್ಪ ಬಂತು ಮಳೆಗಾಲ” ಈ ಗೀತೆಯನ್ನು ಅಭಿನಯದ ಮೂಲಕ ಹೇಳಿಕೊಡುವರು.<br>* **ಕಲಿಕಾಂಶ ಚಟುವಟಿಕೆ :–** ಸಸ್ಯದ ಭಾಗಗಳಾದ ಬೇರು, ಕಾಂಡ, ಎಲೆ ಇವುಗಳನ್ನು ಪ್ರದರ್ಶಿಸುತ್ತಾ ಅವುಗಳ ಕಾರ್ಯಗಳನ್ನು ವಿವರಿಸುವರು.<br>* **ಬೇರು :–** ಬೇರು ಸಸ್ಯವನ್ನು ಭೂಮಿಗೆ ಬಂಧಿಸುತ್ತದೆ ಮತ್ತು ಮಣ್ಣಿನ ಕಣಗಳನ್ನು ಹಿಡಿದಿರುತ್ತವೆ.<br>* **ಕಾಂಡ :–** ಕಾಂಡವು ಕೊಂಬೆ, ರೆಂಬೆ, ಎಲೆ, ಹೂವುಗಳಿಗೆ ಆಧಾರ ನೀಡುತ್ತದೆ.<br>* ಎಲೆ :– ಎಲೆಗಳು ಸಸ್ಯದ ಅಡುಗೆ ಮನೆ ಎನಿಸಿವೆ. ಸಸ್ಯಗಳು ಭಾಷ್ಪ ವಿಸರ್ಜನೆಯ ಮೂಲಕ ಹೆಚ್ಚಾದ ನೀರನ್ನು ಹೊರಹಾಕುತ್ತವೆ. | **English : We're helpful** | Pupils practice the rhyme | Rhyme chart<br><br>Masks of differente animals | Leader, Self Learning | Leader to take up the initiative to practice the rhyme.<br>**'Old Mac Donald'**<br>Teacher to guide the children to do the role play of different animals using the masks and also elicit their uses.<br>Reading the content in a conversational tone by pointing at the pictures. |
| | 10 ನಿಮಿಷ<br>30 ನಿಮಿಷ | | | | ಹಿರೇಮಣಿ | ಕ॥ ಹ॥ ಮೇಲೆ ಬರೆದ ಮುಖ್ಯಾಂಶಗಳನ್ನು ಬರೆದುಕೊಳ್ಳುವರು.<br>ಪ್ರಶ್ನಾವಳಿಯ ಮಿಂಚುಪಟ್ಟಿಯಲ್ಲಿನ ಪ್ರಶ್ನೆಗಳಿಗೆ ಹಿರೇಮಣಿಯ ನೇತೃತ್ವದಲ್ಲಿ ಉತ್ತರ ಬರೆಯುವರು.<br>**ಉದಾ:**<br>1) ಬೇರಿನ 2 ಕಾರ್ಯಗಳನ್ನು ಬರೆಯಿರಿ.<br>2) ಎಲೆಯ ಹಸಿರು ಬಣ್ಣದ್ದಾಗಿರಲು ಕಾರಣವೇನು ?<br>3) ಬಿದಿರು ಯಾವ ಜಾತಿಗೆ ಸೇರಿದ ಸಸ್ಯ ? | **ಸಮಾಜ ವಿಜ್ಞಾನ**<br>**ಭಾರತ ದೇಶ ಮತ್ತು ಜನಾಂಗ (ಮು.ಭಾ)** | * ಐತಿಹಾಸಿಕ ಅರ್ಥ ಮತ್ತು ಪ್ರಾಮುಖ್ಯತೆ ಅರಿಯುವರು. | ಪ್ರಶ್ನಾವಳಿಗಳ ಮಿಂಚುಪಟ್ಟಿ, ನಕಾಶೆ, ಗೋಳ | ಶಿಕ್ಷಕರು | **ಅಭ್ಯಾಸ ಮತ್ತು ಬಳಕೆ ಚಟುವಟಿಕೆ :–**<br>ಪ್ರಶ್ನಾವಳಿ ಕಾರ್ಡುಗಳಿಗೆ ಉತ್ತರಿಸಲು ಸೂಚಿಸುವರು.<br>1) ಇತಿಹಾಸವನ್ನು ನಾವು ಏಕೆ ಅಧ್ಯಯನ ಮಾಡಬೇಕು?<br>2) ಹಿಮಾಲಯ ಪರ್ವತ ಶ್ರೇಣಿಯಲ್ಲಿ ಹುಟ್ಟುವ ನದಿಗಳಾವುವು ?<br>ಅ) ಭಾರತವನ್ನು ಮೂರು ಕಡೆ ಸುತ್ತುವರೆದಿರುವ ಸಮುದ್ರಗಳು<br>ಬ) ನದಿ ದಡದಲ್ಲಿರುವ ದೊಡ್ಡ ಪಟ್ಟಣಗಳನ್ನು ಪಟ್ಟಿ ಮಾಡಿ.<br>ಪ್ರಶ್ನೆಗಳ ಮಿಂಚುಪಟ್ಟಿಯನ್ನಾಧರಿಸಿ ಬರೆದ ಉತ್ತರಗಳನ್ನು ಪರಿಶೀಲಿಸುವರು. |

# 8ನೇ ದಿನ

| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ನಾಲ್ಕನೇ ಅವಧಿ | 10 ನಿಮಿಷ | **ಗಣಿತ**<br>**ಸಂಖ್ಯಾ ಸೂಚಕಗಳು** | * ಕೊಟ್ಟಿರುವ ಅಂಕಿಗಳನ್ನು ಬಳಸಿಕೊಂಡು ಸಾಧ್ಯವಿರುವ ಎಲ್ಲಾ ಮೂರಂಕಿಗಳ, ನಾಲ್ಕಂಕಿಗಳ ಸಂಖ್ಯೆಗಳನ್ನು ರೂಪಿಸುತ್ತಾರೆ. | ಅಂಕಿಗಳ ಮಿಂಚುಪಟ್ಟಿ | ಹಿರೇಮಣಿ | **ಪೂ.ಸಿ.ಚ/ಕ.ಪೂ.ಚ. :–**<br>ಅಂಕಿ ಸಂಖ್ಯೆಗಳನ್ನೊಳಗೊಂಡಂತೆ ಒಂದು ಹಾಡನ್ನು ಹಾಡಿಸುವರು. | **ವಿಜ್ಞಾನ**<br>**ಕೆಲಸ (ಮು.ಪಾಠ)** | * ಕೆಲಸದ ಅರ್ಥವನ್ನು ಉದಾಹರಣೆಯ ಮೂಲಕ ವಿವರಿಸುವುದು ಕೆಲಸ ನಡೆಯುವ ಸಂದರ್ಭವನ್ನು ತಿಳಿಯುವರು.<br>ಸರಳ ಯಂತ್ರಗಳನ್ನು ಪಟ್ಟಿ ಮಾಡುವರು. | ರಟ್ಟು, ದಾರ, ಪೇಪರ್, ಕತ್ತರಿ, ಗೋಂದು<br>ಕಡ್ಡಿಗಳು, ಚಂಡು, ಡಬ್ಬ | ಶಿಕ್ಷಕರು | **ಪೂ.ಸಿ.ಚ. :–**<br>4ನೇ ವರ್ಗದ ಮಕ್ಕಳೊಂದಿಗೆ ಸೂಚನೆಯಂತೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 30 ನಿಮಿಷ | | | | | **ಅಭ್ಯಾಸ ಮತ್ತು ಬಳಕೆ ಚ :–**<br>* ಮಿಂಚುಪಟ್ಟಿಗಳನ್ನು ಬಳಸಿ ನಾಲ್ಕು ಅಂಕಿಗಳ ಸಂಖ್ಯೆಗಳನ್ನು ರಚಿಸುವರು.<br>1 4 6 8<br>ಉದಾ: 4168, 8164, 6841 / 6481, 1648, 4186<br>* 7 2 3 9 7 8 9 5<br>ಈ ಮೇಲಿನ ಮಿಂಚುಪಟ್ಟಿಗಳನ್ನು ಬಳಸಿ ಎಷ್ಟು ಸಂಖ್ಯೆಗಳನ್ನು ರಚಿಸಬಹುದೆಂದು ಯೋಚಿಸಿ ಬರೆಯುವರು. | | | | | * ಸರಳ ಯಂತ್ರಗಳ ಬಗ್ಗೆ ವಿವರಿಸುವರು.<br>* **ಸರಳ ಯಂತ್ರಗಳು :–** ಕತ್ತರಿ, ಚಮಚ, ಅಡಕೊತ್ತು, ಹಾರೆ, ಇಳಿಜಾರೂ, ಚಕ್ರ, ಕೈ ಬಂಡಿ, ಚಿಮುಟ, ಚಾಕು ಇವುಗಳನ್ನು ರಟ್ಟಿಯಿಂದ ಮಾದರಿಯಾಗಿ ತಯಾರಿಸುವರು.<br>* ಶಿಕ್ಷಕರು ತಯಾರಿಸಿದ ಮಾದರಿಯಂತೆ ವಿದ್ಯಾರ್ಥಿಗಳು ಸರಳ ಯಂತ್ರಗಳನ್ನು ತಯಾರಿಸುವಂತೆ ಸೂಚಿಸುವರು. |
| | 10 ನಿಮಿಷ | **ಸಾ.ಉ.ಉ.ಕಾ.** | ಬಣ್ಣದ ಕಾಗದದಿಂದ ಹಾರ ತಯಾರಿಕೆ | ಬಣ್ಣದ ಕಾಗದ, ಕತ್ತರಿ, ಸೂಜಿ, ದಾರ. | ಶಿಕ್ಷಕರು | **ಪೂ.ಸಿ.ಚ. :–**<br>ಹಾಡು:– 'ಬಾರೆ ಮಣಿ ಕೊರಳ ತಣಿ ಮಾಲೆ ಮಾಡುವ' ಎಂಬ ಹಾಡನ್ನು ಸಾಮೂಹಿಕವಾಗಿ ಎರಡೂ ತರಗತಿಗಳಿಗೆ ಹೇಳಿಕೊಡುವರು. | | | | ಹಿರೇಮಣಿ | **ಅ ಮತ್ತು ಬ ಚಟುವಟಿಕೆ :–**<br>* ಶಿಕ್ಷಕರು ನೀಡಿದ ಸೂಚನೆಯಂತೆ ಸರಳ ಯಂತ್ರಗಳನ್ನು ತಯಾರಿಸುವರು. |
| | 30 ನಿಮಿಷ | | | | | **ಕಲಿಕಾಂಶ ಚ. :–**<br>ಹಿಂದಿನ ತರಗತಿಯಲ್ಲಿ ತಿಳಿಸಿದಂತೆ ಈಗ ಬಣ್ಣದ ಕಾಗದ ಮತ್ತು ಚಾಕೋಲೇಟ್ ಪೇಪರ್ ಬಳಸಿ ಹಾರಗಳನ್ನು ತಯಾರಿಸುವರು.<br>**ಉಪಯೋಗ :–**<br>ಶಾಲೆಯಲ್ಲಿನ ಚಿತ್ರಪಟಗಳಿಗೆ ವಿವಿಧ ರೀತಿಯ ಮಾಲೆಗಳನ್ನು ತಯಾರಿಸಿ ಅಲಂಕರಿಸುವರು. ರಾಷ್ಟ್ರೀಯ ಹಬ್ಬಗಳಲ್ಲಿ ತೋರಣಗಳಿಗೆ ಬಳಸಬಹುದು. ಅನುಪಯುಕ್ತ ವಸ್ತುಗಳ ಬಳಕೆ ಬಗ್ಗೆ ತಿಳಿಯುವರು. | | | | | * ಸರಳ ಯಂತ್ರಗಳನ್ನು ಪಟ್ಟಿ ಮಾಡಿ ಉಪಯೋಗಗಳನ್ನು ಬರೆಯುವರು.<br>* ಆಯಾ ಉಪಕರಣಗಳು ಸುಲಭವಾಗಿ ಕೆಲಸ ಮಾಡಲು ಹೇಗೆ ಸಹಾಯಕವಾಗಿವೆ ಎಂಬುದನ್ನು ಬರೆಯುವರು. |

# 9ನೇ ದಿನ

| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಒಂದನೇ ಅವಧಿ | 10 ನಿಮಿಷ | ಕನ್ನಡ<br>ಪಕ್ಷಿ ಪ್ರೇಮಿ ಸಲೀಂ ಅಲಿ (ಮು.ಪಾಠ) | * ಪರಿಚಿತ ಸನ್ನಿವೇಶಗಳು ಮತ್ತು ಅಪರಿಚಿತ ಸನ್ನಿವೇಶಗಳಲ್ಲಿ ಭಾಷಣ–ಸಂವಾದಗಳನ್ನು ಆಲಿಸುವುದರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಪ್ರಶಸ್ತಿಗಳಿಸಿರುವ ಚಿತ್ರಪಟಗಳು, ಪಕ್ಷಿಗಳ ಚಿತ್ರಪಟ, ವೃತ್ತಪತ್ರಿಕೆಗಳ ಕಟಿಂಗ್ಸ್. | ಶಿಕ್ಷಕರು | **ಪೂ.ಸಿ.ಚ. :–**<br>“ಬಾರೋ ಬಾರೋ ಗುಬ್ಬಚ್ಚಿ<br>ಕಾಳು ಕೊಡುವೆ ಪಾಪಚ್ಚಿ<br>ಕಾಳನ್ನು ಕಚ್ಚಿ ರೆಕ್ಕೆಯನ್ನು ಬಿಚ್ಚಿ<br>ಮರ್‍ರನೆ ಹಾರುವ ಗುಬ್ಬಚ್ಚಿ”<br>ಎಂಬ ಅಭಿನಯ ಗೀತೆಯನ್ನು ಹೇಳಿಕೊಡುವರು. | 5ನೇ ವರ್ಗದ ಮಕ್ಕಳು 3ನೇ ವರ್ಗದ ಮಕ್ಕಳೊಂದಿಗೆ ಭಾಗವಹಿಸುತ್ತಾರೆ. | | | | |
| | 30 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>ಮಾದರಿಯಾಗಿ ಪಾಠವನ್ನು ವಾಚಿಸುವರು.<br>ನಂತರ ಮಕ್ಕಳು ಓದುವರು.<br>(ಪುಟ ಸಂಖ್ಯೆ 7<br>ಮಕ್ಕಳೇ............ ............... ............... ...............<br>............... ............... ಕೈ ಬೀಸಿ ಕರೆಯುತ್ತಿತ್ತು)<br>ಮಕ್ಕಳು ಓದುವಾಗ ಉಚ್ಚಾರಣಾ ದೋಷಗಳನ್ನು ತಿದ್ದಿ ಸ್ಪಷ್ಟವಾಗಿ ಹೇಳುವಂತೆ ತಿಳಿಸಿ ಕೊಡುವರು. ನಂತರ ಪಾಠಕ್ಕೆ ಸಂಬಂಧಿಸಿದಂತೆ ಕಲಿಕೋಪಕರಣಗಳನ್ನು ಪ್ರದರ್ಶಿಸಿ ಪ್ರಶಸ್ತಿ, ಬಹುಮಾನಗಳ ಬಗ್ಗೆ ವಿವರಣೆ ನೀಡುವರು. | | | | | |
| | 30 ನಿಮಿಷ | | | | | **ಅಭ್ಯಾಸ ಚಟುವಟಿಕೆ :–**<br>ಪಕ್ಷಿಗಳ ಚಿತ್ರಪಟಗಳನ್ನು ಕೊಟ್ಟು ಈ ರೀತಿ ಚಿತ್ರಗಳನ್ನು ಬರೆದು ಬಣ್ಣ ಹಚ್ಚಲು ಸೂಚಿಸುವರು. | | | | | |
| | 10 ನಿಮಿಷ | | | | | ಪತ್ರಿಕೆಗಳಲ್ಲಿ ಬರುವ ಪಕ್ಷಿ ಚಿತ್ರಗಳ ಆಲ್ಬಂ ವೀಕ್ಷಿಸುವರು. | | | | | |

# 9ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 10 ನಿಮಿಷ | **ಜೀವನ ವಿಜ್ಞಾನ**<br>**ಮನರಂಜನೆ ಆಟಗಳು** | * ವ್ಯಾಯಾಮಗಳ ಬಗ್ಗೆ ತಿಳಿಯುವುದು | | ಶಿಕ್ಷಕರು | ಮಕ್ಕಳನ್ನು ಆಟದ ಮೈದಾನಕ್ಕೆ ಕರೆದುಕೊಂಡು ಹೋಗಿ ಮನರಂಜನೆ ಆಟ ಆಡಿಸುವರು. | 5ನೇ ತರಗತಿಯ ಮಕ್ಕಳು 3ನೇ ತರಗತಿ ಮಕ್ಕಳೊಡನೆ ಹೊಂದಾಣಿಕೆಯಾಗಿರುತ್ತಾರೆ. | | | | |
| | 30 ನಿಮಿಷ | | | | | **ಮನರಂಜನೆ ಆಟಗಳು :**<br>1) ಮರಕೋತಿ ಆಟ,<br>2) ಹುಲಿ – ಹಸು ಆಟ<br>ಸೂಚನೆಯಂತೆ ಆಟ ಆಡುವರು. | | | | | |
| | 40 ನಿಮಿಷ | **ಸಾ. ಉ. ಉ. ಕಾ.**<br>**ಲಕೋಟೆ ತಯಾರಿಕೆ** | * ಲಕೋಟೆ ತಯಾರಿಕೆ ಹಾಗೂ ಬಳಕೆ ಬಗ್ಗೆ ಅರಿಯುವರು. | ಕತ್ತರಿ, ಅಂಟು, ಬ್ರೌನ್ ಪೇಪರ್ | ಶಿಕ್ಷಕರು | ಮಕ್ಕಳು ಗುಂಪಿನಲ್ಲಿ ಕುಳಿತು ಶಿಕ್ಷಕರು ತಯಾರಿಸಿದ ಲಕೋಟೆಯನ್ನು ವೀಕ್ಷಿಸುವರು.<br>ಶಿಕ್ಷಕರ ಮಾರ್ಗದರ್ಶನದಂತೆ ಮಕ್ಕಳು ಲಕೋಟೆಯನ್ನು ತಯಾರಿಸುವರು.<br>ಲಕೋಟೆ ಬಳಸುವುದನ್ನು ಅರಿಯುವರು. | | | | | |

# 9ನೇ ದಿನ



| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಮೂರನೇ ಅವಧಿ | 10 ನಿಮಿಷ | **ಗಣಿತ**<br>**ಸಂಖ್ಯಾ ಸೂಚಕಗಳು** | * ಕೊಟ್ಟಿರುವ ಅಂಕಿಗಳನ್ನು ಬಳಸಿಕೊಂಡು ಸಾಧ್ಯವಿರುವ ಎಲ್ಲಾ ಮೂರಂಕಿಗಳ ಸಂಖ್ಯೆಗಳನ್ನು ರೂಪಿಸುವರು. | ಸಂಖ್ಯೆಗಳುಳ್ಳ ಮಿಂಚುಪಟ್ಟಿಗಳು | ಹಿರೇಮಣಿ | **ಪೂ.ಸಿ.ಚ. :–**<br>5ನೇ ತರಗತಿ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುವರು. | **ವಿಜ್ಞಾನ**<br>**ಕೆಲಸ (ಮುಂ.ಪಾ)** | * ಕೆಲಸದ ಅರ್ಥವನ್ನು ಉದಾಹರಣೆಯ ಮೂಲಕ ವಿವರಿಸುವುದು. * ಕೆಲಸ ನಡೆಯುವ ಸಂದರ್ಭವನ್ನು ತಿಳಿಯುವರು. | ಗಾಲಿ, ಮಣೆ, ಚೆಂಡು, ಹಗ್ಗ, ಕತ್ತರಿ ಅಡಿಕೆ ಕತ್ತರಿ, ಚಿಮುಟ | ಶಿಕ್ಷಕರು | ಸರಳ ಅಭಿನಯ ಗೀತೆಯನ್ನು ಹೇಳಿಕೊಡುವರು. |
| | 30 ನಿಮಿಷ | | | | | ಹಿಂದಿನ ಅವಧಿಯಲ್ಲಿ ಕಲಿತ ಲೆಕ್ಕಗಳನ್ನು ಪುನರಾವರ್ತನೆ ಮೂಲಕ ವಿಶ್ಲೇಷಿಸಿ ಅಭ್ಯಾಸದ ಲೆಕ್ಕಗಳನ್ನು ಮಾಡುವರು.<br>ನಾಲ್ಕಂಕಿ ಸಂಖ್ಯೆಗಳಲ್ಲಿ ಅತ್ಯಂತ ದೊಡ್ಡ ಮತ್ತು ಅತ್ಯಂತ ಚಿಕ್ಕ ಸಂಖ್ಯೆಗಳನ್ನು ಪಟ್ಟಿ ಮಾಡುವರು.<br>ಮಿಂಚುಪಟ್ಟಿಗಳ ಸಹಾಯದಿಂದ ಮಕ್ಕಳು ನಾಲ್ಕಂಕಿ ಮತ್ತು ಮೂರಂಕಿ ಸಂಖ್ಯೆಗಳನ್ನು ರಚಿಸುವರು. | | | | | **ಕಲಿಕಾಂಶ ಚಟುವಟಿಕೆ :–**<br>ಹಿಂದಿನ ಅವಧಿಯಲ್ಲಿ ಸ್ವ ಕಲಿಕೆಯಲ್ಲಿ ಪಟ್ಟಿ ಮಾಡಿದ ಕೆಲಸಗಳನ್ನು ಯಾವ ಉಪಕರಣಗಳನ್ನು ಬಳಸುವ ವಿಧಾನ, ಕೆಲಸ ಮಾಡಲು ಬಲದ ಅವಶ್ಯಕತೆಯ ಬಗ್ಗೆ ಚಿತ್ರಪಟಗಳನ್ನು ತೋರಿಸುತ್ತಾ ಹಾಗೂ ಕೆಲವು ಸಲಕರಣೆಗಳನ್ನು ಕೊಟ್ಟು ಕೆಲಸ ಆಗುವ ರೀತಿಯನ್ನು ವಿವರಿಸಿ ನಮ್ಮ ಜೀವನದಲ್ಲಿ ಸರಳ ಯಂತ್ರಗಳ ಮಹತ್ವದ ಪಾತ್ರವಹಿಸಿವೆ ಎಂಬುದನ್ನು ತಿಳಿಸುವರು.<br>**ಉದಾ :–** ಸನ್ನೆ, ಇಳಿಜಾರು, ಚಕ್ರ, ಸೈಕಲ್, ಕೈಗಡಿಯಾರ, ರಾಟೆ ಇವುಗಳ ಬಗ್ಗೆ ವಿವರಣೆ ನೀಡುವರು. |
| | 10 ನಿಮಿಷ<br><br>30 ನಿಮಿಷ | **ಕೇಳಿ ಕಲಿ ಕಾರ್ಯಕ್ರಮ** | | ರೇಡಿಯೋ | ಹಿರೇಮಣಿ | ಶಿಕ್ಷಕರು ಪ್ರಸಾರ ಪೂರ್ವ ಚಟುವಟಿಕೆಗಳನ್ನು ಮಾಡಿಸಿ ಹಿರೇಮಣಿ ನೇತೃತ್ವದಲ್ಲಿ ರೇಡಿಯೋ ಪಾಠ ಕೇಳಲು ಮಕ್ಕಳನ್ನು ಸಜ್ಜುಗೊಳಿಸುವರು. | **ಸಮಾಜ ವಿಜ್ಞಾನ**<br>**ಭಾರತ ದೇಶ ಮತ್ತು ಜನಾಂಗ** | * ಇತಿಹಾಸದ ಅರ್ಥ ಮತ್ತು ಸಾಮರ್ಥ್ಯದ ಪ್ರಾಮುಖ್ಯತೆ ಅರಿಯುವರು. | ನದಿ, ಪ್ರಸ್ಥಭೂಮಿ, ಮರುಭೂಮಿಯ ಚಿತ್ರಪಟಗಳು | ಶಿಕ್ಷಕರು | **ಕಲಿಕಾಂಶ ಚಟುವಟಿಕೆ :–**<br>ಭಾರತದ ಭೌಗೋಳಿಕ ನಕ್ಷೆಯಲ್ಲಿ ನದಿಗಳು, ಪ್ರಸ್ಥಭೂಮಿ, ಮರುಭೂಮಿಗಳನ್ನು ಗುರ್ತಿಸಲು ಪ್ರೇರೇಪಿಸುವರು. ಹಿಮಾಲಯ ಪರ್ವತ ಶ್ರೇಣಿ ಬಗ್ಗೆ ವಿವರಿಸುವರು. |

# 9ನೇ ದಿನ



| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ನಾಲ್ಕನೇ ಅವಧಿ | 10 ನಿಮಿಷ | **ಪರಿಸರ ಅಧ್ಯಯನ ಸಸ್ಯ ಪ್ರಪಂಚ** | * ಸಸ್ಯದ ಭಾಗಗಳ ಕಾರ್ಯಗಳನ್ನು ತಿಳಿಯುವರು | ವಿವಿಧ ರೀತಿಯ ಹೂವುಗಳು, ಕಾಯಿಗಳು, ತರಕಾರಿಗಳು ಬೀಜಗಳು, ಧಾನ್ಯಗಳು | ಶಿಕ್ಷಕರು | **ಪೂ.ಸಿ.ಚ. :–**<br>5ನೇ ತರಗತಿ ಮಕ್ಕಳೊಂದಿಗೆ ಭಾಗವಹಿಸುವರು. | **ಸಮಾಜ ವಿಜ್ಞಾನ ಭಾರತ ದೇಶ ಮತ್ತು ಜನಾಂಗ** | * ಭಿನ್ನತೆಯಲ್ಲಿ ಏಕತೆ ಎಂಬ ಭಾರತದ ವೈಶಿಷ್ಟ್ಯವನ್ನು ತಿಳಿಯುವರು. | ಭಾರತದ ನಕ್ಷೆ, ಬಣ್ಣ, ಡ್ರಾಯಿಂಗ್ ಹಾಳೆ | ಹಿರೇಮಣಿ | **ಪೂ.ಸಿ.ಚ. :–** "ಮರೆಯದಿರು ಭಾರತ ಘಟ್ಟ ಬೆಟ್ಟ ಮಹಾನದಿ ಉತ್ತರಕ್ಕೆ ಪರ್ವತ ಮೂರು ಕಡೆ ನೀರ ಸೆಲೆ ಇದುವೆ ನನ್ನ ಭಾರತ".<br>ಈ ಹಾಡನ್ನು ಸಾಮೂಹಿಕವಾಗಿ ಎರಡೂ ತರಗತಿಗಳಿಗೂ ಹೇಳಿಕೊಡುವರು. |
| | 30 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>ಸಸ್ಯದ ಆಕರ್ಷಣೀಯ ಭಾಗವಾದ ಹೂವಿನಿಂದ ಕಾಯಿ ಆಗುವುದು, ಕಾಯಿಯಿಂದ ಬೀಜ, ಬೀಜದಿಂದ ಸಸ್ಯಗಳಾಗುವ ಕ್ರಿಯೆಯನ್ನು, ತಿಳಿಸುತ್ತಾ ಕಾಯಿ ಹಣ್ಣುಗಳು ಪ್ರಾಣಿಗಳಿಗೆ ಪಕ್ಷಿಗಳಿಗೆ ಸಹಾಯಕವಾಗಿವೆ. ಹಾಗೆಯೇ ಧಾನ್ಯಗಳ ಉತ್ಪತ್ತಿ ಹಾಗೂ ಬಳಕೆ ಮಾಡುವ ವಿಧಾನ, ಏಕದಳ ಮತ್ತು ದ್ವಿದಳ ಧಾನ್ಯಗಳ ಬಗ್ಗೆ ತಿಳಿಸಿಕೊಡುವರು. | | | | | ಡ್ರಾಯಿಂಗ್ ಶೀಟ್‌ನಲ್ಲಿ ಭಾರತದ ಭೂಪಟ ಬಿಡಿಸಿ, ಪ್ರಮುಖ 6 ನದಿಗಳು ಹರಿಯುವ ಸ್ಥಳಗಳನ್ನು ಗುರ್ತಿಸಿ ಬಣ್ಣ ಹಚ್ಚುವಂತೆ ಮಾರ್ಗದರ್ಶನ ನೀಡುವರು. |
| | 30 ನಿಮಿಷ | | | | | **ಅಭ್ಯಾಸ ಚಟುವಟಿಕೆ :–**<br>ವಿವಿಧ ರೀತಿಯ ಧಾನ್ಯಗಳ ಸಂಗ್ರಹಣೆ ಮೂಲಕ, ಏಕದಳ ಮತ್ತು ದ್ವಿದಳ ಧಾನ್ಯಗಳನ್ನು ಪಾಲಿಥೀನ್ ಚೀಲದಲ್ಲಿ ಹಾಕಿ ವಿಂಗಡನೆ ಮಾಡಿಸುವರು. | **ಸಾ. ಉ. ಉ. ಕಾ. (ಸೃಜನಾತ್ಮಕ)** | * ಮಕ್ಕಳು ಸೃಜನಾತ್ಮಕತೆಯ ಬಗ್ಗೆ ಅರಿಯುವರು. | ಕತ್ತರಿ, ಉಣ್ಣೆ, ಬಟ್ಟೆ, ರೆಗ್ಸಿನ್‌ಶೀಟ್, ಫೆವಿಕಾಲ್ | ಹಿರೇಮಣಿ | ಶಿಕ್ಷಕರ ಸೂಚನೆಯಂತೆ ಚಳಿಗಾಲ, ಬೇಸಿಗೆ ಕಾಲ, ಮಳೆಗಾಲದಲ್ಲಿ ಬಳಸುವ ಉಡುಪುಗಳ ಚಿತ್ರಪಟ ಬಳಸಿ ಆಲ್ಬಂ ತಯಾರಿಸುವರು. |
| | 10 ನಿಮಿಷ | | | | | **ಮೌಲ್ಯಮಾಪನ ಚಟುವಟಿಕೆ :–**<br>ಮಕ್ಕಳಿಂದ ಹಣ್ಣುಗಳು, ಏಕದಳ ಧಾನ್ಯಗಳ, ದ್ವಿದಳ ಧಾನ್ಯಗಳ, ತರಕಾರಿಗಳ ಪಟ್ಟಿ ಮಾಡಿಸುವರು. | | | | | ಮಕ್ಕಳು ತಯಾರಿಸಿದ ಆಲ್ಬಂ ಪುಸ್ತಕ ರೂಪದಲ್ಲಿ ಸಂಗ್ರಹಿಸಿಡುವರು. |

# 10ನೇ ದಿನ

| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ಘಟಕ/ಉಪಘಟಕದ ಹೆಸರು | ಸಾಮರ್ಥ್ಯಗಳು | ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ಘಟಕ/ಉಪಘಟಕದ ಹೆಸರು | ಸಾಮರ್ಥ್ಯಗಳು | ಕಲಿಕೋಪಕರಣಗಳು | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಒಂದನೇ ಅವಧಿ | 10 ನಿಮಿಷ<br><br>30 ನಿಮಿಷ<br><br>10 ನಿಮಿಷ<br><br>30 ನಿಮಿಷ | **ಪಾಠ**<br>**ಪಕ್ಷಿ ಪ್ರೇಮಿ ಸಲೀಂ ಅಲಿ (ಮು.ಭಾ)** | * ಸರಳ ಲೇಖನ ಚಿಹ್ನೆಗಳಿರುವ ಉಕ್ತಲೇಖನ ತಿಳಿದುಕೊಳ್ಳುವರು. | ಪಕ್ಷಿಗಳ ಕಾರ್ಡುಗಳು, ಭಾಷಣದ ಧ್ವನಿ ಸುರುಳಿಗಳು, ಲೇಖನ ಚಿಹ್ನೆಗಳ ಮಂಜೂಷ | ಶಿಕ್ಷಕರು | **ಪೂ.ಸಿ.ಚ. :–**<br>ಪರಿಣಿತರ ಭಾಷಣಗಳ ಧ್ವನಿಸುರುಳಿ ಆಲಿಸುವರು.<br><br>**ಕಲಿಕಾಂಶ ಚಟುವಟಿಕೆ :–**<br>ಪಕ್ಷಿಪ್ರೇಮಿ ಸಲೀಂ ಅಲಿ ಪಾಠದಲ್ಲಿನ ಮುಖ್ಯಾಂಶಗಳನ್ನೊಳಗೊಂಡ ಶಿಕ್ಷಕರು ಪ್ರಶ್ನೆಗಳನ್ನು ಕೇಳಿ ಉತ್ತರ ಪಡೆಯುವರು.<br>* ಬೆಳ್ಳೂರಿನ ಶಾಲೆಯ ಮುಖ್ಯ ಶಿಕ್ಷಕರು ನೀಡಿದ ಸೂಚನೆ ಏನು ?<br>* ಯುವಕ ಮಂಡಳದವರು ಯಾರ ಜನ್ಮ ಶತಮಾನೋತ್ಸವವನ್ನು ಆಚರಿಸಿದರು ?<br>* ಪಕ್ಷಿ ವೀಕ್ಷಣೆ ಎಂದರೇನು ?<br><br>**ಅ ಮತ್ತು ಬ ಚಟುವಟಿಕೆ :–**<br>* ವಿದ್ಯಾರ್ಥಿಗಳಿಂದ ಪಾಠವನ್ನು ವೈಯಕ್ತಿಕವಾಗಿ ಓದಿಸುವರು.<br>ಬೆಳ್ಳೂರಿನ ಶಾಲೆ .................. ..................<br>........................ ................ ಸಲೀಂ ಅಲಿ ಬರೆದಿದ್ದಾರೆ.<br>* ಪ್ಯಾರಾ 2ನ್ನು ಲೇಖನ ಚಿಹ್ನೆಗಳನ್ನು ಬಳಸಿ ಉಕ್ತಲೇಖನ ಹೇಳಿ ಬರೆಸುವರು.<br>ತಮ್ಮ ಜೀವನವನ್ನೆಲ್ಲ................ ....................<br>...................... ...................... ....................<br>..................... ....................... ಎಂದರು.<br>* ಮಕ್ಕಳು ಬರೆದ ಉಕ್ತಲೇಖನದಲ್ಲಿನ ತಪ್ಪುಗಳನ್ನು ತಿದ್ದುವರು. | 5ನೇ ವರ್ಗದ ವಿದ್ಯಾರ್ಥಿಗಳು 3ನೇ ವರ್ಗದವರೊಂದಿಗೆ ಹೊಂದಾಣಿಕೆಯಾಗಿರುತ್ತಾರೆ. | | | | |

# 10ನೇ ದಿನ



| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ / ಕಲಿಕಾಂಶ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಘಟಕದ ಹೆಸರು | ಸಾಮರ್ಥ್ಯ / ಕಲಿಕಾಂಶ | ಬಳಸುವ ಕಲಿಕೋಪಕರಣಗಳು | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 10 ನಿಮಿಷ | **ಗಣಿತ** **ಸಂಖ್ಯಾ ಸೂಚಕಗಳು** | ಅಂಕಿ ಸಂಖ್ಯೆಗಳ ವಿಸ್ತರಣಾರೂಪ (ಮು.ಪಾ) | ಮಿಂಚುಪಟ್ಟಿ ಸಂಖ್ಯೆಗಳನ್ನು ಬರೆದ ರಟ್ಟಿನ ಚಕ್ರ, ಚಾರ್ಟ್ | ಶಿಕ್ಷಕರು | **ಪೂ.ಸಿ.ಚ. :–**<br>ವೃತ್ತದಲ್ಲಿ ಮಕ್ಕಳನ್ನು ನಿಲ್ಲಿಸಿ, ಪ್ರತಿಯೊಬ್ಬರ ಕೈಗೆ ಅಂಕಿಗಳ ಮಿಂಚು ಪಟ್ಟಿಗಳನ್ನು ನೀಡುವರು. ಒಂದು ಸಂಖ್ಯೆ ಹೇಳಿದಾಗ ಅಂಕಿಯ ಕಾರ್ಡು ಹೊಂದಿದ ಮಕ್ಕಳು ಓಡಿ ಬಂದು ಸಾಲಾಗಿ ನಿಲ್ಲುವರು ಉಳಿದವರು ಆ ಸಂಖ್ಯೆಗಳನ್ನು ಓದುವರು. | 5ನೇ ವರ್ಗದ ವಿದ್ಯಾರ್ಥಿಗಳು 3ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತಾರೆ. | | | | |
| | 30 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>ಉದಾ: ವಿಸ್ತರಿಸಿ ಬರೆಯಿರಿ<br>6738 = 6000 + 700 + 30 + 8. ಮಾದರಿಯಂತೆ ಬರೆಯಲು ಸೂಚಿಸುವರು. ಪ್ರತಿಯೊಬ್ಬರಿಂದ ಓದಿಸುವರು.<br><br> | | | | | |
| | 20 ನಿಮಿಷ | | | | | ಪ್ರತಿ ಮಗುವು ಸರತಿಯಲ್ಲಿ ಬಂದು ರಟ್ಟನ್ನು ತಿರುಗಿಸಿ, ಮುಳ್ಳು ನಿಂತ ಸಂಖ್ಯೆಯನ್ನು ಬಿಡಿಸಿ ಓದುವರು ಮತ್ತು ಕ.ಹ. ಮೇಲೆ ಬರೆಯುವರು.<br>* ವಿವಿಧ ಜಿಲ್ಲೆಗಳಲ್ಲಿಯ ಹಳ್ಳಿಗರ ಜನಸಂಖ್ಯಾ ಚಾರ್ಟ್ ಬರೆದು ತೂಗು ಹಾಕಿದ್ದು, ಓದುವರು, ಬರೆಯುವರು.<br>**ಉದಾ:** ಮಂಡ್ಯದ ಕೊಪಹಳ್ಳಿ – 5648<br>ಕದಿರೇನಹಳ್ಳಿ – 1796 ಇತ್ಯಾದಿ | | | | | |
| | 20 ನಿಮಿಷ | | | | | **ಅಭ್ಯಾಸ ಮತ್ತು ಬಳಕೆಯ ಚಟುವಟಿಕೆ :–**<br>ಮಿಂಚುಪಟ್ಟಿಯಲ್ಲಿಯ ಸಂಖ್ಯೆಗಳನ್ನು ಓದಿ ವಿಸ್ತರಿಸಿ ಬರೆಯಲು ಶಿಕ್ಷಕರು ಸೂಚನೆ ನೀಡುವರು.<br>3968, 5965, 5736, 4836<br>............. ................ ................ ಇತ್ಯಾದಿ | | | | | |

| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| | | ವಿಷಯ ಮತ್ತು ಸಾಮರ್ಥ್ಯ | ಕಲಿಕಾ ಅಂಶ | ಬಳಸುವ ಬೋಧನೋಪಕರಣ ಕಲಿಕಾ ಸಾಮಗ್ರಿ | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಸಾಮರ್ಥ್ಯ | ಕಲಿಕಾ ಅಂಶ | ಬಳಸುವ ಬೋಧನೋಪಕರಣ ಕಲಿಕಾ ಸಾಮಗ್ರಿ | ಸಂಪನ್ಮೂಲ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಮೂರನೇ ಅವಧಿ | 10 ನಿಮಿಷ | ಪರಿಸರ ಅಧ್ಯಯನ ಸಸ್ಯ ಪ್ರಪಂಚ (ಮು.ಭಾ) | * ಸಸ್ಯದ ಭಾಗಗಳ ಕಾರ್ಯ ತಿಳಿಯುವರು. | ಸಸ್ಯದ ಚಿತ್ರಪಟ | ಹಿರೇಮಣಿ | **ಪೂ.ಸಿ.ಚ. :–** ‘ರೇಲ, ರೇಲ ರೇಲ ರೇಲ’ ಎಂಬ ಪರಿಸರ ಗೀತೆಯನ್ನು ಸಾಮೂಹಿಕವಾಗಿ ಅಭಿನಯದ ಮೂಲಕ ಹಾಡಿಸುವರು. | English We’re helpful | Pupils learn the usage of pronouns [I, you, we, she, he) | Rhyme chart | Teacher | Teacher recite the rhyme ‘Old Mac Donald’ and ask the children to repeat it. |
| | 30 ನಿಮಿಷ | | | | | **ಅಭ್ಯಾಸದ ಚಟುವಟಿಕೆ :–** <br>* ಸಸ್ಯದ ಚಿತ್ರವನ್ನು ಬರೆದು ಈ ಕೆಳಗಿನ ಭಾಗಗಳನ್ನು ಗುರುತಿಸಿ, ಬಣ್ಣ ತುಂಬಿ. ಬೇರು, ಕಾಂಡ, ಹೂ, ಹಣ್ಣು, ರೆಂಬೆ, ಎಲೆ, <br>* ನೀವು ನೋಡಿರುವ ಹೂಗಳನ್ನು ಹೆಸರಿಸಿ. | | | Situation | | Divide the class into two’s for pair work. Teacher calls one pair to stand in front of the class and demonstrate the pronouns [I, you, we, she]. <br>Teacher pair the children and ask each one to give out their name .................................. <br>X:- I am Ram, Y:- I am Shyma <br>we are friends, we are in class V |
| | 10 ನಿಮಿಷ | | | | | ಮಕ್ಕಳು ಬರೆದ ಸಸ್ಯದ ಚಿತ್ರವನ್ನು ಶಿಕ್ಷಕರು ವೀಕ್ಷಿಸುವರು. | ಸಮಾಜ ವಿಜ್ಞಾನ ಭಾರತ ದೇಶ ಮತ್ತು ಜನಾಂಗ (ಮು.ಭಾ) | * ಭಿನ್ನತೆಯಲ್ಲಿ ಏಕತೆ ಎಂಬ ಭಾರತದ ವೈಶಿಷ್ಟ್ಯವನ್ನು ತಿಳಿಯುವರು. | ಹಬ್ಬ, ಟೇಪ್‌ರೆಕಾರ್ಡರ್ ವಿವಿಧ ಉಡುಪುಗಳ ಚಾರ್ಟ್, ಹೊಂದಿರುವ ಭಾಷೆಗಳು | ಹಿರೇಮಣಿ | ಹಿರೇಮಣಿ ನೇತೃತ್ವದಲ್ಲಿ ‘ರೇಲ ರೇಲ’ ಹಾಡವನ್ನು ಸಾಮೂಹಿಕವಾಗಿ ಹಾಡಿಸುವರು. |
| | 30 ನಿಮಿಷ | | | | ಶಿಕ್ಷಕರು | **ಕಲಿಕಾಂಶ ಚಟುವಟಿಕೆ :–** <br>ಸಸ್ಯದ ವಿವಿಧ ಭಾಗಗಳ ಕಾರ್ಯವನ್ನು ಪ್ರಶ್ನೆ ಕೇಳಿ ಉತ್ತರ ಬರೆಯಿಸುವರು. <br>* **ಬೇರು:–** ಸಸ್ಯವನ್ನು ಭೂಮಿಗೆ ಗಟ್ಟಿಯಾಗಿ ಬಂಧಿಸುತ್ತದೆ. ಸಸ್ಯಗಳ ಬೆಳವಣಿಗೆಗೆ ನೀರನ್ನು ಎಲೆ, ಕಾಂಡಗಳಿಗೆ ತಲುಪಿಸುತ್ತದೆ. <br>* **ಕಾಂಡ:–** ಕೊಂಬೆ, ರೆಂಬೆ ಎಲೆ ಹೂಗಳಿಗೆ ಆಧಾರ ನೀಡುತ್ತದೆ. ಬೇರುಗಳಿಂದ ಹೀರಿಕೊಂಡ ನೀರನ್ನು ಸಸ್ಯದ ಇತರ ಭಾಗಗಳಿಗೆ ಸಾಗಿಸುತ್ತದೆ. <br>* ಮೃದುಕಾಂಡ ಮತ್ತು ಗಟ್ಟಿಕಾಂಡದ ಸಸ್ಯಗಳನ್ನು ಪಟ್ಟಿ ಮಾಡಿಸುವರು. | | | | | **ಅ ಮತ್ತು ಬ ಚಟುವಟಿಕೆ :–** <br>* **ವೈವಿಧ್ಯತೆಯಲ್ಲಿ ಏಕತೆ:–** <br>1) ಭಾರತದಲ್ಲಿ ಆಚರಿಸುವ ವಿವಿಧ ಹಬ್ಬಗಳನ್ನು ಪಟ್ಟಿ ಮಾಡುವರು. <br>2) ವಿವಿಧ ಭಾಷೆಗಳ ಹಾಡುಗಳನ್ನು ಟೇಪ್‌ರೆಕಾರ್ಡರ್‌ನಲ್ಲಿ ಆಲಿಸುವರು. <br>3) ಬೇರೆ ಬೇರೆ ರಾಜ್ಯದ ಜನರ ಉಡುಪುಗಳನ್ನು ಚಿತ್ರಗಳಲ್ಲಿ ವೀಕ್ಷಿಸುವರು. <br>4) ವೃತ್ತದಲ್ಲಿ ನಿಂತು ಭಾವೈಕ್ಯತೆ ಹಾಡನ್ನು ಹಾಡುವರು. <br>(ಘಟಕ ಪರೀಕ್ಷೆ ಹಾಗೂ ಪರಿಹಾರ ಬೋಧನೆಗೆ ಅವಧಿ ಹೊಂದಾಣಿಕೆ ಮಾಡಿಕೊಳ್ಳುವುದು) |

| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ನಾಲ್ಕನೇ ಅವಧಿ | 10 ನಿಮಿಷ | ಸಾ. ಉ. ಉ. ಕಾ. | * ಚಿತ್ರಗಳನ್ನು ಓರಣವಾಗಿ ಹಚ್ಚುವ ಕೌಶಲ ಬೆಳೆಸುವುದು | ವಿವಿಧ ಪ್ರಾಣಿಗಳ, ಸಸ್ಯಗಳ ಚಿತ್ರಪಟ, ಮಿಂಚು ಪಟ್ಟಿಗಳು | ಶಿಕ್ಷಕರು | **ಪೂ.ಸಿ.ಚ. :–**<br>ವೃತ್ತದಲ್ಲಿ ವಿದ್ಯಾರ್ಥಿಗಳನ್ನು ನಿಲ್ಲಿಸಿ ಬೆಕ್ಕು–ನಾಯಿ, ಆಕಳು, ಹುಂಜದಂತೆ ಪ್ರತಿಯೊಬ್ಬರು ಸರದಿಯಂತೆ ಕೂಗಲು ಹೇಳುವರು. | ವಿಜ್ಞಾನ<br>ಕೆಲಸ (ಮು.ಪಾಂ.) | * ಕೆಲಸದ ಅರ್ಥವನ್ನು ಉದಾಹರಣೆ ಮೂಲಕ ವಿವರಸವರು.<br>* ಕೆಲಸ ನಡೆಯುವ ಸಂದರ್ಭವನ್ನು ತಿಳಿಯುವರು. | ಕತ್ತರಿ, ಅಡಕೊತ್ತು, ಕೈಬಂಡಿ ಚಿತ್ರ, ಹಾಕಿ ಚಾಕು, ಚಮಚ, ಇಳಿಜಾರು | ಹಿರೇಮಣಿ | ನಾಲ್ಕನೇ ತರಗತಿ ಮಕ್ಕಳೊಂದಿಗೆ ಚಟುವಟಿಕೆಯಲ್ಲಿ ಭಾಗವಹಿಸುವರು. |
| | 30 ನಿಮಿಷ | | | | | **ಕಲಿಕಾಂಶ ಚ :–**<br>* ತಂಡ ರಚನೆ (ಕೂಗನ್ನಾಧರಿಸಿ) ಮಾಡುವರು.<br>* ಮೀನು, ನಾಯಿ, ಮೊಸಳೆ, ನರಿ, ಹಲ್ಲಿ, ಬಾತುಕೋಳಿ, ಆಮೆ, ಕರಡಿ, ಘೇಂಡಾಮೃಗ, ಹುಲಿ, ಕರಡಿ, ಸಿಂಹ, ಪಾಡಿ, ಜಾಲಿಮರ, ಕಮಲ, ಮುಳುಗಿಡ ಇತ್ಯಾದಿ ಚಿತ್ರಗಳಿರುವ ಚಿತ್ರಪಟ ವಿತರಿಸುವರು.<br>* ನೆಲ–ಜಲದಲ್ಲಿ ವಾಸಿಸುವ ಪ್ರಾಣಿ–ಸಸ್ಯಗಳ ಚಿತ್ರ ಕತ್ತರಿಸಿ, ಆಯಾ ಪಟ್ಟಿಗಳಲ್ಲಿ ಅಂಟಿಸಿ.<br>* ಸೂಚನೆಯನ್ನು ನೀಡುತ್ತ ಮಾದರಿಯನ್ನು ಮಾಡಿ ತೋರಿಸುವರು. | | | | | 3 ವಿಧದ ಸನ್ನೆಗಳನ್ನು ಪಟ್ಟಿ ಮಾಡುವರು.<br>* 1ನೇ ಪ್ರಕಾರದ ಸನ್ನೆ: ಕತ್ತರಿ, ಸಲಾಕೆ<br>2ನೇ ಪ್ರಕಾರದ ಸನ್ನೆ: ಕೈಬಂಡಿ, ಅಡಕೊತ್ತು<br>3ನೇ ಪ್ರಕಾರದ ಸನ್ನೆ: ಚಾಕು, ಚಿಮುಟ<br>* ಸರಳ ಯಂತ್ರಗಳಿಂದ ನಮ್ಮ ಕೆಲಸ ಸುಲಭವಾಗುವ ರೀತಿಯನ್ನು ವಿವರಿಸುವರು.<br>* ಇಳಿಜಾರು: ಭಾರವಾದ ವಸ್ತುವನ್ನು ಕೆಳಗೆ ಸಾಗಿಸಲು ಹಲಗೆ ಗಾಲಿ ಕುರ್ಚಿ ಇತ್ಯಾದಿ ಬಳಸುವರು.<br>**ಉದಾ:** ಟ್ರಕ್‌ನಿಂದ ಸಾಮಾನುಗಳನ್ನು ಇಳಿಸುವುದು. ಇತ್ಯಾದಿ ಉದಾಹರಣೆಗಳ ಮೂಲಕ ಸ್ಪಷ್ಟಪಡಿಸುವರು. |
| | 10 ನಿಮಿಷ<br>30 ನಿಮಿಷ | | | | ಹಿರೇಮಣಿ | * ಶಿಕ್ಷಕರು ಮಾಡಿ ಪ್ರದರ್ಶಿಸಿದಂತೆ ವಿದ್ಯಾರ್ಥಿಗಳು ಜಲ–ನೆಲ ಪಟ್ಟಿಯಲ್ಲಿಯ ಪ್ರಾಣಿ ಪಕ್ಷಿಗಳನ್ನು ಕತ್ತರಿಸಿ ಅಂಟಿಸುವರು.<br>* ತಂಡದಲ್ಲಿ ಮಾಡಿದ ಕಾರ್ಯವನ್ನು ವೀಕ್ಷಿಸುತ್ತ ಹಿರೇಮಣಿಯ ಅಗತ್ಯ ನೆರವು ನೀಡುವರು.<br>* ನೆಲ–ಜಲದ ಸಸ್ಯ ಪ್ರಾಣಿಗಳ ಹೆಸರು ಪಟ್ಟಿ ಮಾಡುವರು. | ಸಾ. ಉ. ಉ. ಕಾ. | * ಆಲ್ಬಂ ತಯಾರಿಸುವ ಕೌಶಲ್ಯ ಬೆಳೆಸುವುದು. ನೆಲ–ಜಲ ಸಸ್ಯಗಳನ್ನು ತಿಳಿಯುವರು. | ಡ್ರಾಯಿಂಗ್ ಶೀಟ್, ಚಿತ್ರಗಳು ನೆಲ–ಜಲ, ಸಸ್ಯಗಳ ಚಿತ್ರಪಟಗ, ಗೋಂದು, ರಟ್ಟು. | ಶಿಕ್ಷಕರು | * ನೆಲ–ಜಲ ಸಸ್ಯ, ಪ್ರಾಣಿಗಳ ಆಲ್ಬಂ ತಯಾರಿಕೆ.<br>* ಒಂದೊಂದು ಅಲ್ಬಂಗೆ ಹೆಸರು ಕೊಡುವರು. |

# 11ನೇ ದಿನ



| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಒಂದನೇ ಅವಧಿ | 10 ನಿಮಿಷ | **ಕನ್ನಡ**<br>**ಪಕ್ಷಿ ಪ್ರೇಮಿ ಸಲೀಂ ಅಲಿ** | * ಪರಿಚಿತ ಸನ್ನಿವೇಶಗಳು ಮತ್ತು ಅಪರಿಚಿತ ಸನ್ನಿವೇಶಗಳಲ್ಲಿ ಭಾಷಣ-ಸಂವಾದಗಳನ್ನು ಆಲಿಸುವುದುರ ಜೊತೆಗೆ ಅರ್ಥಮಾಡಿಕೊಳ್ಳುವುದು. | ಆಶುಭಾಷಣಕ್ಕೆ ವಿಷಯ (ಘಟನೆ) ಬರೆದ ಚೀಟಿಗಳು | ಶಿಕ್ಷಕರು | **ಪೂ.ಸಿ.ಚ. :-**<br>ಪತ್ರಿಕೆಗಳಲ್ಲಿ ಬರುವ ಪಕ್ಷಿ ಚಿತ್ರಗಳ ಸಂಗ್ರಹ ವೀಕ್ಷಿಸುವರು. | 5ನೇ ತರಗತಿಯ ಮಕ್ಕಳು 3ನೇ ತರಗತಿಯೊಂದಿಗೆ ಹೊಂದಾಣಿಕೆಯಾಗಿರುತ್ತದೆ. | | | | |
| | 30 ನಿಮಿಷ | | | | | **ಕಲಿಕಾಂಶ ಚಟುವಟಿಕೆ :-**<br>ಗುಂಪುಗಳಾಗಿ ಮಾಡಿ ಪ್ರತಿ ಗುಂಪಿಗೂ ಒಂದೊಂದು ವಿಷಯವನ್ನು ನೀಡಿ ಅದರ ಬಗ್ಗೆ ಆಶುಭಾಷಣ ಸ್ಪರ್ಧೆಯ ರೀತಿ ಮಾತನಾಡುವಂತೆ ಮಾರ್ಗದರ್ಶನ ನೀಡುವರು. ಮೊದಲು ಶಿಕ್ಷಕರು ಡಬ್ಬದಲ್ಲಿರುವ ಒಂದು ವಿಷಯವನ್ನು ತೆಗೆದು ಕೊಂಡು ಸರಾಗವಾಗಿ ಮಾತನಾಡಬೇಕು.<br>**ಉದಾ:** ಹಸು, ತೆಂಗಿನಮರ, ರೇಷ್ಮೆ, ಗಿಳಿ, ಪಾರಿವಾಳ, ನವಿಲು, ಕೋಗಿಲೆ, ಕೋಳಿ, ಆನೆ, ಕರಡಿ, ನಾಯಿ. | | | | | |
| | 30 ನಿಮಿಷ<br><br>10 ನಿಮಿಷ | | | | | * ವಿದ್ಯಾರ್ಥಿಗಳು ಚೀಟಿಯಲ್ಲಿ ದೊರೆತ ವಿಷಯದ ಬಗ್ಗೆ ಮಾತನಾಡುವರು.<br><br>* ಪಕ್ಷಿಧಾಮ ಮತ್ತು ಮೃಗಾಲಯಗಳ ಚಿತ್ರಪಟ ಪ್ರದರ್ಶಿಸುವರು. | | | | | |

| | | ನಾಲ್ಕನೇ ತರಗತಿ | | | | | ಐದನೇ ತರಗತಿ | | | | |
|---|---|---|---|---|---|---|---|---|---|---|---|
| ಅವಧಿ | ಸಮಯ ಹಂಚಿಕೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
| 1 | 2 | 3 | 4 | 5 | 6 | 7 | 8 | 9 | 10 | 11 | 12 |
| ಎರಡನೇ ಅವಧಿ | 10 ನಿಮಿಷ | **ಪರಿಸರ ಅಧ್ಯಯನ**<br>**ಸಸ್ಯ ಪ್ರಪಂಚ (ಮು.ಪಾಠ)** | * ಸಸ್ಯದ ಭಾಗಗಳನ್ನು ಗುರುತಿಸುವರು ಭಾಗಗಳ ಕಾರ್ಯಗಳನ್ನು ತಿಳಿಯುವರು. | ವಿವಿಧ, ರೀತಿಯ ಸಸ್ಯಗಳು, ಹೂಗಳು<br>ಕ್ರಯಾನ್ಸ್ ಬಿಳಿ ಹಾಳೆ | ಶಿಕ್ಷಕರು | **ಪೂ.ಸಿ.ಚ. :–**<br>ಮಕ್ಕಳನ್ನು ಸ್ಥಳೀಯ ಪರಿಸರಕ್ಕೆ ಕರೆದುಕೊಂಡು. ಹೋಗುವರು. | **5ನೇ ತರಗತಿಯ ಮಕ್ಕಳು 3ನೇ ತರಗತಿಯ ಮಕ್ಕಳೊಡನೆ ಹೊಂದಾಣಿಕೆಯಾಗಿರುತ್ತಾರೆ** | | | | |
| | 30 ನಿಮಿಷ | | | | | **ಕಲಿಕಾಂಶ ಚಟುವಟಿಕೆ :–**<br>ಮಕ್ಕಳನ್ನು ಗುಂಪು ಮಾಡಿಕೊಂಡು ಪ್ರತಿ ಗುಂಪಿಗೂ ಬೇರು, ಕಾಂಡ, ಕೊಂಬೆ, ಎಲೆ, ಹೂವು, ಕಾಯಿ, ಹಣ್ಣು, ಬೀಜ ಎಂಬ ಹೆಸರನ್ನಿಟ್ಟು ಆಯಾ ತಂಡಕ್ಕೆ ವಿವಿಧ ರೀತಿಯ ಸಸ್ಯಗಳ ಭಾಗಗಳನ್ನು ತರುವಂತೆ ತಿಳಿಸುವರು. ಪ್ರತಿ ಗುಂಪಿನವರು ಸಂಗ್ರಹಣೆ ಮಾಡಿ ತಂದ ಭಾಗಗಳ ಬಗ್ಗೆ ವಿವರಣೆ ನೀಡುವರು. | | | | | |
| | 20 ನಿಮಿಷ | | | | | **ಅಭ್ಯಾಸ ಚಟುವಟಿಕೆ :–**<br>ಗುಂಪುಗಳಲ್ಲಿ ತಂದಿರುವ ಸಸ್ಯದ ಭಾಗಗಳನ್ನು ಗುಂಪುಗಳಲ್ಲಿ ಅದಲು ಬದಲು ಮಾಡಿ ಮಕ್ಕಳಿಂದ ಹೇಳಿಸುವರು. | | | | | |
| | 20 ನಿಮಿಷ | | | | | **ಮೌಲ್ಯಮಾಪನ ಚಟುವಟಿಕೆ :–**<br>1) ಪರಿಸರದಲ್ಲಿ ನೀವು ನೋಡಿರುವ ಸಸ್ಯಗಳನ್ನು ಹೆಸರಿಸಿ.<br>2) ಅಂದವಾಗಿ ಕಾಣುವ 4 ಹೂಗಳನ್ನು ಬರೆದು ಬಣ್ಣ ಹಚ್ಚಿ. | | | | | |

# 11ನೇ ದಿನ



| ಅವಧಿ | ಸಮಯ ಹಂಚಿಕೆ | ನಾಲ್ಕನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ | ಐದನೇ ತರಗತಿ: ವಿಷಯ ಮತ್ತು ಪಾಠದ ಹೆಸರು | ಸಾಮರ್ಥ್ಯದ ವಿವರ | ಬಳಸ ಬಹುದಾದ ಕಲಿಕಾ ಸಾಮಗ್ರಿ | ನಿರ್ವಹಣೆ | ಕಲಿಕಾ ಪ್ರಕ್ರಿಯೆ |
|---|---|---|---|---|---|---|---|---|---|---|---|
| 1 | 2 | 3 | 4 | 5 | 6 | 7 | 8 | 9 | 10 | 11 | 12 |
